ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ.ಸಿ. ಸಂಃ 747/2024**

| | | |
|---|---|---|
| ಸಾಕ್ಷಿಯ ಹೆಸರುಃ | ರೋಹಿತ್ | ಫ್ರಾಸಾಃಃ 2 |
| ತಂದೆಯ ಹೆಸರುಃ | ರವಿಕುಮಾರ | ಚಾಸಾಃಃ 2 |
| ವಯಸ್ಸುಃ | 25 ವರ್ಷ | ಪ್ರಮಾಣೀಕರಿಸಿದ ದಿಃ 13.02.2026 |
| ಉದ್ಯೋಗಃ | ಕೂಲಿ | |
| ವಾಸ ಸ್ಥಳಃ | ಮಾಕನಹಳ್ಳಿ ಪಾಳ್ಯ ಗ್ರಾಮ, ಪಿರಿಯಾಪಟ್ಟಣ ತಾಃ | |

ಮುಖ್ಯ ವಿಚಾರಣೆಃ ಸಸಅ ರಿಂದಃ

1. ನನಗೆ ಆರೋಪಿಗಳ ಪರಿಚಯವಿದೆ. ಈ ಪ್ರಕರಣದ ವಿಷಯ ನನಗೆ ಗೊತ್ತಿಲ್ಲ. ಫ್ರಾಸಾ - 1 ಮತ್ತು ಚಾಸಾ - 3 ನನಗೆ ಗೊತ್ತು. ಆರೋಪಿತರು ನಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಕಬ್ಬಿಣದ ರಾಡು ಮತ್ತು ದೊಣ್ಣೆಯಿಂದ ಹೊಡೆದಿಲ್ಲ, ತಬ್ಬಿಕೊಂಡು ಕೈಯಿಂದ ಹೊಡೆದಿಲ್ಲ, ಒದ್ದಿಲ್ಲ ಹಾಗೂ ಚಾಸಾ -3 ರವರ ನೈಟಿ ಹಿಡಿದುಕೊಂಡು ಎಳೆದಾಡಿಲ್ಲ ಹಾಗೂ ನಮಗೆ ಕೊಲೆ ಬೆದರಿಕೆ ಹಾಕಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಸಸಅ ರವರಿಂದಃ

1. ದಿಃ 28.05.2024 ರಂದು ರಾತ್ರಿ 9-00 ಗಂಟೆ ಸಮಯದಲ್ಲಿ 2 ನೇ ಆರೋಪಿಯ ಮನೆ ಮುಂದೆ ಫ್ರಾಸಾ - 1 ರವರು ನಡೆದುಕೊಂಡು ಹೋಗುತ್ತಿದ್ದಾಗ, ಈ ಪ್ರಕರಣದ ಆರೋಪಿತರು ಹಳೇ ದ್ವೇಷ ಇಟ್ಟುಕೊಂಡು ಸಮಾನ ಉದ್ದೇಶದಿಂದ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಕಬ್ಬಿಣ ರಾಡು ಹಾಗೂ ದೊಣ್ಣೆಯನ್ನು ಹಿಡಿದುಕೊಂಡು ಬಂದು ಫ್ರಾಸಾ - 1 ರವರಿಗೆ ಮುಂದೆ ಹೋಗದಂತೆ ಅಡ್ಡಗಟ್ಟಿ ಈ ನನ್ನ ಮಗನನ್ನು ಮುಗಿಸಿ ಬಿಡೋಣ ಎಂದು ಹೊಡೆಯಲು ಬಂದರು ಎಂದರೆ ಸರಿಯಲ್ಲ. ನಂತರ ನಿಮ್ಮ ಮನೆಯವರದು ಅತಿಯಾಯಿತು ಎಂದು 1 ನೇ ಆರೋಪಿ ಕಬ್ಬಿಣದ ರಾಡಿನಿಂದ ಫ್ರಾಸಾ - 1 ರವರ ತಲೆಯ ಹಿಂಭಾಗದ ಬಲ ಭಾಗಕ್ಕೆ ಹೊಡೆದರು ಎಂದರೆ ಸರಿಯಲ್ಲ. 2 ನೇ ಆರೋಪಿ ಫ್ರಾಸಾ - 1 ರವರನ್ನು ತಬ್ಬಿ ಹಿಡಿದುಕೊಂಡು ಕೈಗಳಿಂದ ಮೈಕೈಗೆ

ಹೊಡೆದರು ಎಂದರೆ ಸರಿಯಲ್ಲ. 3 ನೇ ಆರೋಪಿ ಕಾಲಿನಿಂದ ಮೈಕೈಗೆ ಒದ್ದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. 4 ನೇ ಆರೋಪಿ ಫ್ರಾಸಾ - 1 ರವರ ಬೆನ್ನಿಗೆ ಕಾಲಿನಿಂದ ಒದ್ದರು ಎಂದರೆ ಸರಿಯಲ್ಲ.

2. ನಂತರ ನನಗೆ 5 ನೇ ಆರೋಪಿ ದೊಣ್ಣೆಯಿಂದ ತಲೆಗೆ ಹೊಡೆದರು ಎಂದರೆ ಸರಿಯಲ್ಲ. 6 ಮತ್ತು 7 ನೇ ಆರೋಪಿತರು ನನ್ನ ಮುಖಕ್ಕೆ ಕೈಗಳಿಂದ ಗುದ್ದಿದರು ಎಂದರೆ ಸರಿಯಲ್ಲ.

3. ನಂತರ ಚಾಸಾ - 3 ರವರ ನೈಟಿಯನ್ನು 1 ಮತ್ತು 2 ನೇ ಆರೋಪಿತರು ಹಿಡಿದು ಎಳೆದಾಡಿ ನೈಟಿಯನ್ನು ಹರಿದು ಹಾಕಿ ಅವರಿಗೆ ಅವಮಾನ ಮಾಡಿದರು ಎಂದರೆ ಸರಿಯಲ್ಲ. ನಂತರ ಆರೋಪಿತರು ನನ್ನ ಮಗನೇ ಈ ದಿನ ತಪ್ಪಿಸಿಕೊಂಡಿದ್ದೀರಾ ನಿಮ್ಮನ್ನು ಇಂದಲ್ಲಾ ನಾಳೆ ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ - **2** ಎಂದು ಗುರುತಿಸಲಾಯಿತು.

4. ಈಗ ನಾವು ಹಾಗೂ ಆರೋಪಿತರು ಪರಸ್ಪರ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದೇ ಕಾರಣಕ್ಕೆ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ವಕೀಲರಿಂದಃ</u>

ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ